

# ಕಂದನ ಪ್ರಶ್ನೆ

■ ಜೆ.ಎಸ್. ಗಾಂಜೇಕರ

ಹಕ್ಕಿ
ಭತ್ತ ಹೆಕ್ಕಿ
ಹಾರಿತು ಗಗನಕೆ

ಬೆಕ್ಕು
ಹಾಲು ನೆಕ್ಕಿ
ಸರಿಯಿತು ಪಕ್ಕಕೆ

ಇದ ನೋಡಿದ
ಕಂದ
ಅಮ್ಮನ ಕರೆದ

ಯಾಕೆ ಅಮ್ಮ
ಹಕ್ಕಿ ಹೆಕ್ಕಿತು
ಬೆಕ್ಕು ನೆಕ್ಕಿತು?

ಯಾಕಂದರೆ
ಅವಕ್ಕೆ ಹಸಿವಾಯಿತು.



ಚಿತ್ರಗಳು: ವಿಜಯಕುಮಾರಿ

# ಬಕಪಕ್ಷಿಯ ಉಪಕಾರ

■ ಕೆ. ಶ್ರೀನಿವಾಸರಾವ್

ಒಂದು ಹಳ್ಳಿಯಲ್ಲಿ ಒಬ್ಬ ಬಡ ನೇಕಾರ ತನ್ನ ತಾಯಿಯೊಂದಿಗೆ ವಾಸಿಸುತ್ತಿದ್ದ. ಒಂದು ದಿನ ಅವನು ಪಟ್ಟಣಕ್ಕೆ ಹೋಗುತ್ತಿದ್ದಾಗ ಮರದ ಪಕ್ಕ ಅನಿರೀಕ್ಷಿತವಾಗಿ ಒಂದು ಬಕಪಕ್ಷಿಯನ್ನು ಕಂಡ. ಅದನ್ನು ಎತ್ತಿ ಪರೀಕ್ಷಿಸಿದ. ಪಾಪ! ಅದರ ರೆಕ್ಕೆಗಳ ತುಂಬಾ ಕಡುರಕ್ತದ ಹನಿ. ಬಹುಶಃ ಯಾವುದೋ ಹದ್ದು ಗಾಯಗೊಳಿಸಿರಬೇಕು ಎಂದುಕೊಂಡ. ಅವನು ಅದನ್ನು ಎತ್ತಿಕೊಂಡು ಮನೆಗೆ ತೆಗೆದುಕೊಂಡು ಹೋಗಿ ಗಾಯವನ್ನು ತೊಳೆದು ಔಷಧಿ ಹಚ್ಚಿದ. ಆಹಾರ ನೀಡಿ ಆರೈಕೆ ಮಾಡಿದ. ಒಂದೆರಡು ದಿನಗಳಲ್ಲಿ ಚೇತರಿಸಿಕೊಂಡ ಬಕಪಕ್ಷಿ ಅವನಿಗೆ ಕೃತಜ್ಞತೆ ಹೇಳಿ ಹಾರಿಹೋಯಿತು.

ಮರುವಾರ ಒಬ್ಬ ಸುಂದರ ಸ್ತ್ರೀ ನೇಕಾರನ ತಾಯಿಯ ಬಳಿ ಬಂದು ತಾನು ಅನಾಥೆ. ಆ ಮನೆಯ ಸೊಸೆಯಾಗಬಯಸುವುದಾಗಿ ತಿಳಿಸಿದಳು. ನೇಕಾರನಿಗೂ ಮದುವೆಯಾಗಿರಲಿಲ್ಲ. ತಾಯಿ ಸಂತೋಷದಿಂದ ಒಪ್ಪಿ ವಿವಾಹವೂ ಸರಳವಾಗಿ ಜರುಗಿತು. ಸೊಸೆ ನಿಜಕ್ಕೂ ಸದ್ಗುಣಗಳ ಖಣಿ. ಪತಿ ಸೇವೆ, ಅತ್ತೆಯ ಚಾಕರಿ, ಮನೆಗೆಲಸ ಎಲ್ಲವನ್ನೂ ಚೊಕ್ಕವಾಗಿ ನಿಭಾಯಿಸಿ ಇಬ್ಬರಿಗೂ ಮನ ಮೆಚ್ಚಿದವಳಾಗಿಬಿಟ್ಟಳು.

ಆ ವರ್ಷ ದುರದೃಷ್ಟವಶಾತ್ ಬರಗಾಲ ಬಿದ್ದಿತ್ತು. ನೇಕಾರನ ಪುರಾತನ ಮಾದರಿಯ ಬಟ್ಟೆಗಳನ್ನು ಕೊಳ್ಳುವವರೇ ಇಲ್ಲವಾಗಿ ಮನೆಯಲ್ಲಿ ಊಟಕ್ಕೂ ತೊಂದರೆಯಾಯಿತು. ಸೊಸೆ ತನ್ನ ಗಂಡನಲ್ಲಿ ಹೇಳಿದಳು. 'ನೋಡಿ ನಾನು ವಿಶಿಷ್ಟವಾಗಿ ಮಕಮಲ್ ದಿರಿಸು ಹೊಲಿದು ಕೊಡುತ್ತೇನೆ. ಅದನ್ನು ಮಾರಿ ಹಣ ತನ್ನಿ. ಆದರೆ ಒಂದು ನಿಯಮ ನಾನು ಕೋಣೆಯಲ್ಲಿ ಅದನ್ನು ನೇಯುವಾಗ ಯಾರೂ ಬಾಗಿಲು ತೆರೆದು ಒಳನೋಡಬಾರದು. ಏನನ್ನೂ ಕೇಳಬಾರದು' ಎಂದಿತು.

ಅಮ್ಮ–ಮಗನಿಗೆ ಅಚ್ಚರಿಯಾದರೂ ಒಪ್ಪಿ ತಲೆಯಾಡಿಸಿದರು. ಮೊದಲ ದಿನ ಸೊಸೆ ಕೋಣೆಯ ಬಾಗಿಲು ಹಾಕಿಕೊಂಡು ಕೆಲ ಗಂಟೆಗಳಲ್ಲಿ ಒಂದು ಅದ್ಭುತ ಮಕಮಲ್ ದಿರಿಸು ತಯಾರಿಸಿ ತಂದು ಕೊಟ್ಟಳು. ಗಂಡನಿಗೆ ಆಶ್ಚರ್ಯ! ಅಂಥ ಅದ್ಭುತ ನೇಯುವ ಕಲೆಗಾರಿಕೆ ಅವನೆಂದೂ ಕಂಡಿರಲಿಲ್ಲ. ಪಟ್ಟಣಕ್ಕೆ ಹೋಗಿ ಮಾರಿ ಹಣ ತಂದ. ಆಕೆ ನಿತ್ಯ ವಿನೂತನ ಮಾದರಿಯ ಬಟ್ಟೆ ತಯಾರಿಸಿ ಕೊಡುತ್ತಿದ್ದಳು. ಪತಿ ಮಾರಿ ಹಣ ತಂದು ಕೊಡುತ್ತಿದ್ದ. ಒಂದು ದಿನ ಪತಿಗೆ ಯೋಚನೆಯೊಂದು ಆರಂಭವಾಯಿತು. ನಿತ್ಯ ತನ್ನ ಪತ್ನಿ ಒಂದೊಂದು ದಿರಿಸು ತಯಾರಿಸುತ್ತಾಳೆ. ಆದರೆ ಅವುಗಳನ್ನು ತಯಾರಿಸಲು ಯಾವುದೇ ಕಚ್ಚಾ ವಸ್ತುಗಳನ್ನು ತೆಗೆದುಕೊಳ್ಳುತ್ತಿಲ್ಲ. ಹತ್ತಿ, ಬಣ್ಣಗಳಿಲ್ಲದೇ ಅವಳು ಬಟ್ಟೆ ಹೇಗೆ ತಯಾರಿಸುತ್ತಾಳೆ? ಈ ರಹಸ್ಯವನ್ನು ಪರೀಕ್ಷಿಸಲೇಬೇಕು ಎಂದು ಅಂದು ನಿರ್ಧರಿಸಿದ.

ನಿಧಾನವಾಗಿ ಕಿಟಕಿಯ ಬಾಗಿಲನ್ನು ಓರೆ ಮಾಡಿ ಒಳಗೆ ನೋಡಿದ. ಪತ್ನಿ ಕಾಣುತ್ತಿಲ್ಲ. ಆದರೆ ಒಂದು ಸುಂದರ ಬಕಪಕ್ಷಿ ಕುಳಿತಿದೆ. ತನ್ನ ರೆಕ್ಕೆಗಳನ್ನು ಬಾಯಿಂದ ಜಗ್ಗಿ ಎಳೆಗಳನ್ನು ತೆಗೆದುಕೊಂಡು ಕಾಲಿನಿಂದ ಬಟ್ಟೆ ನೇಯುತ್ತಿದೆ. ಅದರೆ ಕೊರಳಲ್ಲಿ ಒಂದು ಗಾಯವಾಗಿದ್ದು ಅಲ್ಲಿ ಬಸಿಯುವ ನೆತ್ತರ ಹನಿಗಳನ್ನೇ ಚಿಮುಕಿಸಿ ಬಟ್ಟೆಯ ಮೇಲೆ ಚುಕ್ಕಿಗಳ ವಿನ್ಯಾಸ ಮಾಡುತ್ತಿದೆ. ನೇಕಾರನಿಗೆ ಮಕ್ಮಲ್ ದಿರಿಸಿನ ನಿಗೂಢತೆ ಮನದಟ್ಟಾಗಿ ಹೋಗಿತ್ತು. ತಾನು ಅಂದು ರಕ್ಷಿಸಿದ ಬಕಪಕ್ಷಿ ಈ ರೀತಿಯಲ್ಲಿ ಕೃತಜ್ಞತೆ ತೋರಿ ಉಪಕರಿಸುತ್ತಿದೆ. ಎಂಥಾ ವೈಚಿತ್ರ್ಯ ಎನ್ನುತ್ತಾ ಕುತೂಹಲ ತಾಳದೆ ಕಿಟಕಿಯಿಂದ ನೋಡಿದ. ಅತ್ತೆ ಬೆದರಿ ಚೀರಿಬಿಟ್ಟಳು. ತಕ್ಷಣ ಬಕಪಕ್ಷಿ ಹಾರಿ ಮನೆಯಿಂದ ಹಾರಿಹೋಯಿತು. ■



ಚಿತ್ರ: ಮಂಜುನಾಥ ಹುಲಕೊಪ್ಪದ